ಅಂತ ಐದು ರೂಪಾಯಿಯನ್ನು ಇನ್ನಷ್ಟು ಮುಂದೆ ನೀಡಿದ. ಅಂಗಡಿಯವನ ಮುಖ ವಿವರ್ಣವಾಯಿತು ಎಂದು ಹೇಳಿದರಷ್ಟೇ ಸಾಕೆ? ಅಥವಾ...

ಇನ್ನು ಕೆಲವು ವ್ಯವಹಾರ ಕುಶಲವುಳ್ಳವರು ಅಥವಾ ಸಾಲ ನೀಡುವ, ಕೊಡುವ, ಪಡೆಯುವ ಈ ಯಾವ ಗೋಜಿಗೂ ಸಿಕ್ಕಿಹಾಕಿಕೊಳ್ಳಲು ಇಷ್ಟಪಡದವರು ತಮ್ಮ ಬಳಿಗೆ ಸಾಲ ಕೇಳಿ ಜನ ಬರದ ಹಾಗೆ ನೋಡಿಕೊಳ್ಳಲು ಉಪಾಯವೊಂದನ್ನು ಕಂಡುಹಿಡಿದುಕೊಂಡಿದ್ದಾರೆ. ಹೇಗೆನ್ನುತ್ತೀರೋ? ತಮ್ಮ ಬಳಿಗೆ ಆ ರೀತಿ ಯಾರಾದರೂ ಬಂದರೆ ಅವರಿಗೆ, 'ಸಾಲ ಕೊಡುವುದಿಲ್ಲ', 'ಹಣವಿಲ್ಲ' ಅಂತ ಹೇಳುವ ಬದಲು, ಒಂದು ನೂರು ರೂಪಾಯಿ ಸಾಲ ಕೇಳಿದವರಿಗೆ ಇಪ್ಪತ್ತೈದೊ, ಐವತ್ತೊ ರೂಪಾಯಿಗಳನ್ನು ಕೊಟ್ಟು, 'ಇದನ್ನು ಇಟ್ಟುಕೊಳ್ಳಿ, ಹಿಂದಿರುಗಿಸಬೇಕಿಲ್ಲ' ಎಂದು ಕಿರು ನಗುವಿನೊಂದಿಗೆ ಬಂದವನನ್ನು ಸಾಗಹಾಕುತ್ತಾರೆ. ಅವರಿಗೆ ತಮ್ಮ ಕೈಯಿಂದ ಒಂದಿಷ್ಟು ಹಣ ಹೋದರೂ ಸಾಲದ ಗೋಜಿರುವುದಿಲ್ಲ; ಅವರಿಗದು ಬೇಕಿರುವುದೂ ಇಲ್ಲ. ಇನ್ನು ಹಣ ಪಡೆದ ವ್ಯಕ್ತಿ, ಅದನ್ನು ನೀಡಿದವರಿಗೆ ಎಂದೆಂದೂ ಚಿರಋಣಿಯಾಗಿ ಇರುತ್ತಾನೆ ಅಂತಾಯಿತಲ್ಲವೆ? ಯಾರಾದರೂ ತಮ್ಮ ಹೆಸರನ್ನು ಚಿರ ಸ್ಥಾಯಿಯಾಗಿಸಿಕೊಳ್ಳಬೇಕೆಂದರೆ, ಅವರು ಈ ಪ್ರಯೋಗವನ್ನೊಮ್ಮೆ ಮಾಡಬಹುದು. ಈ ಸಮಯದಲ್ಲಿ ನನಗೆ ಹಾಸ್ಯದ ತುಣುಕೊಂದು ನೆನಪಿಗೆ ಬರುತ್ತದೆ – ದೀರ್ಘಾಯುಷ್ಯಿಗಳಾದ ವ್ಯಕ್ತಿಯೊಬ್ಬರನ್ನು ಒಬ್ಬ ಆಗಂತುಕನು ಕೇಳಿದನಂತೆ, 'ಸ್ವಾಮಿ, ನಿಮ್ಮ ದೀರ್ಘಾಯುಷ್ಯದ ಗುಟ್ಟೇನು?' ಅಂತ. ವಯೋವೃದ್ಧರು ನಗು ನಗುತ್ತಾ ಹೇಳಿದರಂತೆ, 'ನನಗೆ ಸಾಲ ಕೊಟ್ಟವರೆಲ್ಲ ಆತ್ಮಹತ್ಯೆ ಮಾಡಿಕೊಂಡರು' ಅಂತ.

ಸಾಲ ವ್ಯವಹಾರ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ನಡವಳಿಕೆ. ಅದು ತಪ್ಪೂ ಇರಬಹುದು, ಆದರೆ, ಈ ವ್ಯವಹಾರ ಉಳ್ಳವರ ನಡುವೆ ಸಲೀಸಾಗಿರುತ್ತದೆ. ಇಲ್ಲದವರ ನಡುವೆ ವೈರುಧ್ಯದಿಂದ ಕೂಡಿರುತ್ತದೆ. ಈ ಮುಂದಿನ ಮಾತನ್ನು ನೀವೊಮ್ಮೆ ಸೂಕ್ಷ್ಮವಾಗಿ ಗಮನಿಸಿದರೆ ಅರ್ಥವಾಗುತ್ತದೆ. ಸಾಲಗಾರನನ್ನು ಒಬ್ಬ ಸಾಲಿಗ ಕುರಿತು ಹೇಳುವ ಮಾತು, 'ನಿನ್ನಲ್ಲಿ ಹಣವಿದೆಯೋ ಆಮೇಲೆ ನನಗೆ ಸಾಲ ಹಿಂದಿರುಗಿಸು, ಹಣವಿಲ್ಲವೋ ಹಾಗಾದರೆ ಈಗಲೇ ಕೊಡು' ಅಂತ. ಮನುಷ್ಯನ ಈ ಸಾಲದ ವ್ಯವಹಾರದ ಬಗ್ಗೆ ಎಷ್ಟು ಬರೆದರೂ ಅದಕ್ಕೆ ತುದಿ ಮೊದಲಿಲ್ಲ. ಆದರೂ ನಮ್ಮ ಬದುಕನ್ನು ನಾವು ರೂಪಿಸಿಕೊಳ್ಳಬೇಕೆಂದರೆ, ಆದಷ್ಟು ಸಾಲವಿಲ್ಲದ ಬದುಕನ್ನು ನಾವು ಬಾಳಬೇಕು. ಅದೇ ನೆಮ್ಮದಿ ತರುತ್ತದೆ. ಬದುಕಿನಲ್ಲಿ ನೆಮ್ಮದಿ ಇಲ್ಲದ ಮನುಷ್ಯ ಹುಟ್ಟಿನಲ್ಲಿ ಏನನ್ನೂ ಸಾಧಿಸಲಾರ. ಏನೂ ಸಾಧನೆ ಇಲ್ಲದ ಬರೀ 'ಉಂಡ್ಕೊಂಡು ತಿಂದ್ಕೊಂಡು' ಕಾಲಹರಣ ಮಾಡುವ ಬದುಕು ಅದು ಯಾತರದ್ದು? ಎಂಬುದು ನಮ್ಮ ಮುಂದಿನ ಪ್ರಶ್ನೆ. ಅದಕ್ಕೆ ಉತ್ತರ ನಮ್ಮ ನಿಮ್ಮೊಳಗೇ ಇದೆ, ಹುಡುಕಿ, ತಡಕಿ...


### ಹೊರೆಯಾಲ ದೊರೆಸ್ವಾಮಿ

ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹೊರೆಯಾಲ ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿದ್ದರು. ಒಂಬತ್ತು ಕವನ ಸಂಕಲನಗಳು, ಮೂರು ಕಥಾಸಂಕಲನಗಳು, ಮೂರು ಕಾದಂಬರಿಗಳು, 15 ನಾಟಕಗಳು, ಐದು ಜನಪದ ಸಾಹಿತ್ಯ ಸಂಗ್ರಹಗಳು ಸೇರಿದಂತೆ ಈವರೆಗೆ 56 ಕೃತಿಗಳು ಪ್ರಕಟವಾಗಿವೆ. 'ಬಯಲು' ಕಾದಂಬರಿ ಚಲನಚಿತ್ರವಾಗಿದೆ. ಪ್ರಸ್ತುತ ಮೈಸೂರಿನಲ್ಲಿ ವಾಸ.